(ಇ) ಅನ್ವಯಿಸುವುದಿಲ್ಲ.

(ಈ) ಸಿರಗುಪ್ಪ ಪುರಸಭೆಯು ಸದರಿ ವಿಷಯವಾಗಿ ಪ್ರಸ್ತಾವನೆ ಸಲ್ಲಿಸಿದ ನಂತರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರು–ಜಾಲ್ಸೂರು ರಸ್ತೆ ಅಗಲೀಕರಣ

955 (882); ಶ್ರೀ ನಾರಾಯಣ ಗೌಡ (ಕೆ.ಆರ್.ಪೇಟೆ)

(ಅ) ಬೆಂಗಳೂರು–ಜಾಲ್ಸೂರು ರಸ್ತೆ ಅಗಲೀಕರಣ ಕಾಮಗಾರಿಯ ನಾಗಮಂಗಲ ಮತ್ತಿತರ ರಸ್ತೆ ಅಗಲೀಕರಣ ಇದುವರೆವಿಗೂ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಇದುವರೆವಿಗೂ ರಸ್ತೆಗಳ ಅಗಲೀಕರಣ ಮಾಡದಿರುವುದಕ್ಕೆ ಕಾರಣವೇನು;

(ಇ) ಸದರಿ ರಸ್ತೆಯನ್ನು ಯಾವಾಗ ಅಗಲೀಕರಣ ಮಾಡಲಾಗುವುದು?

ಡಾ: ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

(ಅ) ಬೆಂಗಳೂರು ಜಾಲ್ಸೂರು ರಾಜ್ಯ ಹೆದ್ದಾರಿ – 85 ರಲ್ಲಿ ಕೆಆರ್ ಪೇಟೆ ಉಪ ವಿಭಾಗದ ವ್ಯಾಪ್ತಿಯ ಕಿ.ಮೀ. 133.37 ರಿಂದ ಕಿ.ಮೀ. 171.10 ರಲ್ಲಿ (ಆಯ್ದ ಭಾಗಗಳಲ್ಲಿ) ಹಾಲಿ ಇರುವ ರಸ್ತೆಯನ್ನು ಎಸ್ ಹೆಚ್ ಡಿ ಪಿ ವತಿಯಿಂದ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಅದರಲ್ಲಿ ರಸ್ತೆ ಅಗಲೀಕರಣ ಮಾಡುವ ಪ್ರಸ್ತಾವನೆ ಇರುವುದಿಲ್ಲ.

(ಆ) ಕೆ ಆರ್ ಪೇಟೆಯಲ್ಲಿ ರಸ್ತೆ ಅಗಲೀಕರಣ ಪ್ರಸ್ತಾವನೆ ಸಧ್ಯಕ್ಕೆ ಅಭಿವೃದ್ಧಿ ಪಡಿಸುತ್ತಿರುವ ಕಾಮಗಾರಿಯಲ್ಲಿ ಸೇರಿರುವುದಿಲ್ಲ.

(ಇ) ಮುಂದೆ ಅವಶ್ಯಕತೆಗನುಗುಣವಾಗಿ ಯೋಜಿಸಲಾಗುವುದು.

ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು

956 (883); ಶ್ರೀ ನಾರಾಯಣ ಗೌಡ (ಕೆ. ಆರ್. ಪೇಟೆ)

(ಅ) ಕೆ. ಆರ್. ಪೇಟೆ ಟೌನಿನಲ್ಲಿ ಒಳಚರಂಡಿ ಕಾಮಗಾರಿಯು ಕಳಪೆ ಗುಣ ಮಟ್ಟದ್ದಾಗಿದ್ದು, ಮ್ಯಾನ್‌ಹೋಲ್ ನಿಂದ ಕಲುಷಿತ ನೀರು ರಸ್ತೆಯ ಮೇಲೆ ಹರಿಯುತ್ತಿದ್ದು, ದುರ್ನಾತ ಬೀರುತ್ತಿದ್ದು ಅಕ್ಕಪಕ್ಕದ ಮನೆಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

(ಆ) ಸದರಿ ಕಳಪೆ ಕಾಮಗಾರಿ ಮಾಡಿದವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

(ಇ) ಸದರಿ ಒಳಚರಂಡಿ ಸಂಪರ್ಕ ವ್ಯವಸ್ಥೆಯನ್ನು ಸರಿಪಡಿಸುವ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ವಿನಯಕುಮಾರ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು)

(ಅ) ಕೆ. ಆರ್. ಪೇಟೆ ಪಟ್ಟಣದ ಒಳಚರಂಡಿ ಯೋಜನೆಯಡಿ ಸಂಪರ್ಕಜಾಲ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿರುತ್ತದೆ. ಆದರೆ ಈ ಕೊಳವೆಗಳ ಮುಖಾಂತರ ಕೊಳಚೆ ನೀರನ್ನು ಶೇಖರಿಸಿ ಶುದ್ಧೀಕರಿಸಲು ಶುದ್ಧೀಕರಣ ಘಟಕದ ಭೂಮಿಯನ್ನು ಪಟ್ಟಣ ಪುರಸಭೆಯವರು ಮಂಡಳಿಗೆ ಹಸ್ತಾಂತರ ಮಾಡಿರುವುದಿಲ್ಲ.

ಸಂಪರ್ಕ ಜಾಲದ ಕಾಮಗಾರಿಯೂ 2011–12ರ ಅವಧಿಯಲ್ಲಿ ಪೂರ್ಣಗೊಂಡಿರುತ್ತದೆ. ಶುದ್ಧೀಕರಣ ಘಟಕದ ಕಾಮಗಾರಿಯು ಪೂರ್ಣಗೊಳ್ಳದೆ ಒಳಚರಂಡಿಯ ಗೃಹ ಸಂಪರ್ಕ ಕೊಡಬಾರದಾಗಿ ಪುರಸಭೆಯವರಿಗೆ ತಿಳಿಸಲಾಗಿತ್ತು. ಆದರೂ ಸಹ ಅನೇಕ ಕಡೆಗಳಲ್ಲಿ ಗ್ರಾಹಕರು ಅನಧೀಕೃತವಾಗಿ ಸಂಪರ್ಕ ತೆಗೆದುಕೊಂಡಿರುವುದರಿಂದ ಕೊಳಚೆ ನೀರು ಅಲ್ಲಲ್ಲಿ ತುಂಬಿ ಹರಿಯುತ್ತಿದೆ.

(ಆ) ಕಾಮಗಾರಿಯನ್ನು ಗುತ್ತಿಗೆ ಕರಾರಿನನ್ವಯ ಗುಣಮಟ್ಟ ಕಾಪಾಡಿ ಕಾರ್ಯ ನಿರ್ವಹಿಸಲಾಗಿರುತ್ತದೆ. ಅನಧಿಕೃತ ಗೃಹ ಸಂಪರ್ಕ ಕೊಟ್ಟಿರುವ ಕಾರಣ ಈ ರೀತಿಯ ನ್ಯೂನತೆ ಕಂಡು ಬಂದಿರುತ್ತದೆ.

(ಇ) ಯೋಜನೆಯ ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿದ್ದು, ಶುದ್ಧೀಕರಣ ಘಟಕಕ್ಕೆ ಸಂಬಂಧಿಸಿದಂತೆ ಹೊಸಹೊಳಲು ರಸ್ತೆಯಲ್ಲಿ ಸರ್ವೆ ನಂ. 4.6ರಲ್ಲಿ 08 ಎಕರೆ ಸರ್ಕಾರಿ ಜಾಗವನ್ನು ಗುರುತಿಸಿದ್ದು, ಕೆಲವು ಸ್ಥಳೀಯ ರೈತರು ಸ್ಥಳೀಯ ನ್ಯಾಯಾಲಯದಲ್ಲಿ ದಾವೆ ಹೂಡಿರುವು ದರಿಂದ ಶುದ್ಧೀಕರಣ ಘಟಕದ ಕಾಮಗಾರಿಯನ್ನು ಗುತ್ತಿಗೆದಾರರು ಕೈಗೆತ್ತಿಕೊಳ್ಳಲಾಗಿಲ್ಲ.

ಹಾಗೂ ಪಟ್ಟಣದ ಹೊಸಹೊಳಲು ಪ್ರದೇಶದ ಆಶ್ರಯ ಬಡಾವಣೆ ಯಲ್ಲಿ ತೇವಬಾವಿಯನ್ನು ನಿರ್ಮಿಸಲು ಪುರಸಭೆಯವರು ಇನ್ನೂ ಸ್ಥಳ ಹಸ್ತಾಂತರಿಸಿರುವುದಿಲ್ಲ.

ಈ ಎರಡೂ ಕಾಮಗಾರಿಗಳಿಗೆ ಈಗಾಗಲೇ ಗುತ್ತಿಗೆದಾರರನ್ನು ನೇಮಿಸಿದ್ದು, ಭೂಮಿಯ ಅಲಭ್ಯತೆಯಿಂದ ಕಾಮಗಾರಿ ಪ್ರಾರಂಭವಾಗಿರು ವುದಿಲ್ಲ. ಪುರಸಭೆಯವರು ಸ್ಥಳವನ್ನು ಮಂಡಳಿಗೆ ಹಸ್ತಾಂತರಿಸಿದ ತಕ್ಷಣವೇ ಕಾಮಗಾರಿಯನ್ನು ಪೂರ್ಣಗೊಳಿಸಿ ಯೋಜನೆ ಚಾಲನೆ ಗೊಳಿಸಲಾಗುವುದು. ಅನಂತರ ಮೇಲಿನ ತೊಂದರೆಗಳು ನಿವಾರಣೆ ಯಾಗುತ್ತದೆ.

ರಾಜ್ಯ ಹೆದ್ದಾರಿಗಳ ಅಭಿವೃದ್ಧಿ

958 (1507); ಶ್ರೀ ನಾರಾಯಣಸ್ವಾಮಿ ಎಸ್. ಎನ್ (ಬಂಗಾರಪೇಟೆ)

(ಅ) ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಯೋಜನೆಯಲ್ಲಿ ರಾಜ್ಯದಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ 3ನೇ ಹಂತದ ಯೋಜನೆ ಕೈಗೆತ್ತಿಕೊಳ್ಳುವ ಉದ್ದೇಶ ಇದೆಯೇ;

(ಆ) ಇದ್ದಲ್ಲಿ, ಎಷ್ಟು ಕಿ. ಮೀ. ರಸ್ತೆಯನ್ನು ಕೈಗೆತ್ತಿಕೊಳ್ಳಲಾಗುವುದು ಮತ್ತು ಅಂದಾಜು ಮೊತ್ತ ಎಷ್ಟು;

(ಇ) ಸದರಿ ಯೋಜನೆಗೆ ಹಣಕಾಸು ಇಲಾಖೆಯಿಂದ ಸಹಮತಿ ದೊರೆತಿದೆಯೇ;